ಅ. ವೃದ್ಧಾಪ್ಯವೇತನ ಮತ್ತು ಅಂಗವಿಕಲರ ವೇತನ ಮಂಜೂರಾತಿ ಬಗ್ಗೆ ಪ್ರಾಥಮಿಕ ಹಂತದ ವರದಿಯನ್ನು ಒಪ್ಪಿಸುವ ಬಗ್ಗೆ;

ಆ. ಪ್ರತಿಯೊಬ್ಬ ರೈತರ ಭೂ ದಾಖಲೆಗಳನ್ನು ಅನುಕ್ರಮವಾಗಿ ಮತ್ತು ವ್ಯವಸ್ಥಿತ ರೀತಿಯಲ್ಲಿಡುವ ಬಗ್ಗೆ;

ಇ. ಕೊಳವೆ ಬಾವಿಗಳು ವಿಫಲಗೊಂಡ ಸಂದರ್ಭದಲ್ಲಿ ಪೂರ್ಣಗೊಳ್ಳದ ದಾಖಲೆಗಳನ್ನು ಕುರಿತು ರೈತರಿಗೆ ಸಕಾಲದಲ್ಲಿ ವರದಿ ಒದಗಿಸದಿರುವ ಬಗ್ಗೆ;

ಈ. ಸರ್ಕಾರವು ನಿಯಮ ಬಾಹಿರರಾದ ಗ್ರಾಮ ಲೆಕ್ಕಿಗರ ಮೇಲೆ ಕ್ರಮಕೈಗೊಂಡಿದೆಯೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು) :—

ಅ. ಪ್ರಾರ್ಥಮಿಕ ಹಂತದ ವರದಿಗಳನ್ನು ಕಂದಾಯ ನಿರೀಕ್ಷಕರು ಗ್ರಾಮ ಲೆಕ್ಕಿಗರ ಸಹಾಯದಿಂದ ತಯಾರಿಸುತ್ತಿದ್ದಾರೆ. ಈ ವರದಿಗಳನ್ನು ತಹಶೀಲ್ದಾರರುಗಳಿಂದ ಪರಿಶೀಲಿಸಲ್ಪಡುತ್ತದೆ ಮತ್ತು ವಿಳಂಬವಾದ ಪ್ರಕರಣಗಳನ್ನು ಕಾನೂನು ರೀತಿಯಲ್ಲಿ ಪರಿಗಣಿಸಲಾಗುತ್ತವೆ. ವಿಳಂಬವನ್ನು ತಡೆಗಟ್ಟುವ ಅವಶ್ಯಕತೆಯನ್ನು ಪುನರ್ವಚನಗೊಳಿಸಲಾಗುತ್ತದೆ.

ಆ. ಪ್ರತಿಯೊಬ್ಬ ರೈತರ ಭೂದಾಖಲೆಗಳನ್ನು ಅನುಕ್ರಮವಾಗಿ ಮತ್ತು ವ್ಯವಸ್ಥಿತ ರೀತಿಯಲ್ಲಿಡುವುದು ಕರ್ನಾಟಕ ಭೂ ಕಂದಾಯ ನಿಯಮಾವಳಿ ಪ್ರಕಾರ ಗ್ರಾಮ ಲೆಕ್ಕಿಗರ ಆದ್ಯ ಕರ್ತವ್ಯವಾಗಿದೆ. ಈ ಲೆಕ್ಕಗಳನ್ನು ಪ್ರತಿ ವರ್ಷವೂ ಜಮಾಬಂದಿಯ ಕಾಲದಲ್ಲಿ ತನಿಖೆ ಮಾಡಲಾಗುತ್ತದೆ. ವಿಳಂಬದ ಪ್ರಕರಣಗಳು ಯಾವುದಾದರೂ ಕಂಡು ಬಂದಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲಾಗುವುದು.

ಇ. ವಿಫಲಗೊಂಡ ಕೊಳವೆ ಬಾವಿಗಳ ಬಗೆಗೆ ಸಾಲ ಪಡೆದಂತಹವರು ತಹಶೀಲ್ದಾರ್ ಅಥವಾ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ವಿಫಲಗೊಂಡ ಬಾವಿಗಳೆಂದು ಘೋಷಿಸುವುದಕ್ಕೆ ಮತ್ತು ರಿಯಾಯಿತಿಯನ್ನು ಹೊಂದುವುದಕ್ಕೆ ಅರ್ಜಿಯನ್ನು ಹಾಕಿಕೊಳ್ಳಬೇಕು. ಹಕ್ಕು ಭಾದ್ಯತೆಗೆ ಸಂಬಂಧಿಸಿದ ದಾಖಲೆಗಳನ್ನು ಹೊಂದುವ ಸಲುವಾಗಿ ಭೂ ಮಾಲೀಕರು ಸಂದರ್ಶಿಸಿದಾಗ ಗ್ರಾಮಲೆಕ್ಕಿಗರು ಒದಗಿಸುತ್ತಿದ್ದಾರೆ. ಕಾರಣ ತತ್ಸಂಬಂಧಲ್ಲಿ ವ್ಯವಸ್ಥಿತ ರೀತಿಯಲ್ಲಿ ಇಡುವ ಅಥವಾ ಅವಶ್ಯಕ ದಾಖಲಾತಿಗಳೆನ್ನು ರೈತರಿಗೆ ಒದಗಿಸದಿರುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಈ. ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ :—ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಸಂಕೇಶ್ವರ ಕುರಿತು.

ಪ್ರ. 81 (2) ಶ್ರೀ ಮಲ್ಲಾರಪಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಸಂಕೇಶ್ವರದ ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಚಿತ್ರಮಂದಿರವನ್ನು ಕಟ್ಟಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೆ ;

ಆ. ಚಿತ್ರಮಂದಿರಕ್ಕೆ ಬಳಸಿದ ಸ್ಟೀಲು ಸರಕಾರದ ಖೋಟದಿಂದ ಮಂಜೂರಾಗಿರುವುದೋ ಅಥವಾ ಹೊರಗಿನಿಂದ ತರಿಸಿದ್ದೋ ;

ಇ. ಚಿತ್ರಮಂದಿರಕ್ಕಾಗಿ ಸರಕಾರ ಖೋಟಾದಿಂದ ಮಂಜೂರಾದ ಸ್ಟೀಲನ್ನು ಚಿತ್ರಮಂದಿರಕ್ಕಾಗಿ ಉಪಯೋಗಿಸಿದ್ದು ನಿಜವೋ ;

ಈ. ಚಿತ್ರಮಂದಿರಕ್ಕಾಗಿ ತಗುಲಿದ ವೆಚ್ಚವೆಷ್ಟು ;

ಉ. ಚಿತ್ರ ಮಂದಿರವನ್ನು ಪೂರ್ಣಗೊಳಿಸಿ ಎಷ್ಟು ವರ್ಷಗಳಾಗಿವೆ. ಅದು ಅಲ್ಪ ಕಾಲದಲ್ಲಿಯೇ ಬೀಳಲು ಕಾರಣಗಳೇನು ?

ಶ್ರೀ ಆರ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).—

ಅ. ಇಲ್ಲಾ. ಅವರು ಕಟ್ಟಿಸಿರುವುದು ಒಂದು ಸಮಾಜ ಮಂದಿರ.

ಆ. ಉದ್ಭವಿಸುವುದಿಲ್ಲ. ಆದಾಗ್ಯೂ ಈ ಸಮಾಜ ಮಂದಿರಕ್ಕೆ ಒಂದು ಸಲ ಬಳಸಲ್ಪಟ್ಟ ಮತ್ತು ಉಪಯೋಗಕ್ಕೆ ಬಾರದ ಉಕ್ಕನ್ನು ಉಪಯೋಗಿಸಲಾಗಿದೆಯೆಂದು ತಿಳಿದು ಬಂದಿದೆ.

ಇ. ಉದ್ಭವಿಸದು.

ಈ. ಈ ಸಮಾಜ ಮಂದಿರಕ್ಕೆ ಅವರು ವೆಚ್ಚ ಮಾಡಿರುವ ಹಣ 2,03,690 ರೂ. ಗಳು.

ಉ. ಮೂರು ವರ್ಷಗಳ ಹಿಂದೆ ಈ ಸಮಾಜ ಮಂದಿರವನ್ನು ಕಟ್ಟಲಾಗಿದೆ. ಆದು ಬಿದ್ದಿಲ್ಲ.

ವಿಷಯ :—ಹಿರಣ್ಯಕೇಶಿ ನದಿಗೆ ತಾರಿಖು 27-6-83 ರಿಂದ ಬಂದ ಮಹಾಪೂರದ ಬಗ್ಗೆ

ಪ್ರ. 83 (6) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಸಂಕೇಶ್ವರ ಪಟ್ಟಣ ಹಾಗೂ ಉಕ್ಕೇರಿ ತಾಲ್ಲೂಕಿನಲ್ಲಿಯ ಹಿರಣ್ಯಕೇಶಿ ಮಹಾಪೂರದಿಂದ ನೊಂದ ಕುಟುಂಬಗಳ ಸಂಖ್ಯೆ ಎಷ್ಟು (ಊರಿನ ಹೆಸರುಗಳನ್ನು ತಿಳಿಸುವುದು);

ಆ. ವಿತರಣೆ ಮಾಡಿದ ಪರಿಹಾರ ಧನವೆಷ್ಟು;

ಇ. ತಾತ್ಕಾಲಿಕ ವಸತಿಗಾಗಿ ನೊಂದ ಜನರಿಗಾಗಿ ತೆಗೆದುಕೊಂಡ ಕಾರ್ಯಕ್ರಮವೇನು :

ಈ. ನೊಂದ ಪ್ರತಿಯೊಂದು ಕುಟುಂಬಕ್ಕೆ ದೀರ್ಘಾವಧಿ ಸಾಲವನ್ನು ಕೊಡಲು ತೆಗೆದುಕೊಂಡ ಕ್ರಮವೇನು :

ಉ. ನೊಂದ ಜನರಿಗೆ ಪರಿಹಾರಧನ ಕೊಡುವಲ್ಲಿ ಪಕ್ಷಪಾತವಾಗಿದ್ದು ನೊಂದದೇ ಇರತಕ್ಕಂಥ ಜನರಿಗೆ ಪರಿಹಾರಧನ ಕೊಟ್ಟದ್ದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು):—

ಅ. ಸಂಕೇಶ್ವರ ಪಟ್ಟಣ ಹಾಗೂ ಉಕ್ಕೇರಿ ತಾಲ್ಲೂಕಿನಲ್ಲಿಯ ಹಿರಣ್ಯಕೇಶಿ ಮಹಾಪೂರದಿಂದ ನೊಂದ ಕುಟುಂಬಗಳ ಸಂಖ್ಯೆ 733.

ಈ ಕೆಳಗೆ ವಿವರಗಳನ್ನು ತೋರಿಸಿರುತ್ತೆ.

	ಊರಿನಹೆಸರು	ನೊಂದಕುಟುಂಬಗಳ ಸಂಖ್ಯೆ
1.	ಸಂಕೇಶ್ವರ	485
2.	ಬಸ್ತವಾಡ	45
3.	ಗೌಡವಾಡ	17
4.	ಬಡಕುಂದ್ರಿ (ಗುಡಿ)	30
5.	ಕೊಚರಿ	22
6.	ಹೊಸೂರ	76
7.	ಅರ್ಜುನವಾಡ	15
8.	ಪಾಶ್ಚಾಪುರ	23
9.	ಚಿಕ್ಕಲಗುಡ್ಡ	10
10.	ಮದಮಕ್ಕನಹಾಳ	2
11.	ಕುರಣಿ	8
	ಒಟ್ಟು	733

ಆ. ವಿತರಣೆ ಮಾಡಿದ ಪರಿಹಾರಧನ : 2, 81, 346-00 ರೂಪಾಯಿಗಳನ್ನು ಹಂಚಲಾಗಿದೆ. ಇದರಲ್ಲಿ 14-40 ಕ್ವಿಂಟಲ್ ಅಕ್ಕಿ ಮತ್ತು 138 ಕ್ವಿಂಟಲ್ ಗೋದಿ ವಿತರಣೆ ಮಾಡಿದ್ದು ಒಳಗೊಂಡಿದೆ.

ಹುಕ್ಕೇರಿ, ಚಿಕ್ಕೋಡಿ ಮತ್ತು ಗೋಕಾಕ್ ತಾಲ್ಲೂಕುಗಳಲ್ಲಿ 85 ನೊಂದ ಕುಟುಂಬದವರಿಗೆ ಟ್ಯಾಂಜೆಟ್ ಶೆಡ್ಡುಗಳನ್ನು ಕಟ್ಟಲು 5000 ಬೇಕಾಗಿರುವುದು. ಈಗಾಗಲೇ 1840 ತಗಡುಗಳನ್ನು ಕರ್ನಾಟಕಾ ಸ್ಟೇಟ್ ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಶನ್ಸ್ ಮತ್ತು ವಿ.ಎ.ಎಸ್.ಎಲ್. ಬೆಂಗಳೂರಿನಿಂದ ಪಡೆದುಕೊಳ್ಳಲಾಗಿದೆ. ಹುಕ್ಕೇರಿ ತಾಲ್ಲೂಕಿನ 20 ನೊಂದ ಕುಟುಂಬದವರಿಗೆ ಟ್ಯಾಂಜೆಟ್ ಶೆಡ್ಡುಗಳನ್ನು ಈ ಕೆಳಗಿನಂತೆ ಒದಗಿಸಲಾಗಿದೆ.

ಸಂಕೇಶ್ವರ ಪಟ್ಟಣ	— 2
ಹೊಸೂರ	— 2
	—
	4
	—

ಇನ್ನು 3160 ತಗಡುಗಳಿಗೆ ಸರ್ಕಾರವು 11—00 ಲಕ್ಷ ರೂಪಾಯಿಗಳನ್ನು ಟ್ಯಾಂಜೆಟ್ ಶೆಡ್ಡುಗಳನ್ನು ಕಟ್ಟಲು ಬಿಡುಗಡೆ ಮಾಡಿದೆ ; ತಗಡುಗಳನ್ನು ಸ್ಥಳೀಯ ಪೇಟೆಯಿಂದ

ಕೊಟೇಶನ್‌ಗಳನ್ನು ಕರೆದುಕೊಂಡು ಕೊಳ್ಳಲು ಸರಕಾರ ಸೂಚನೆ ಕೊಟ್ಟಿರುವುದು, ಬಿಡುಗಡೆ ಮಾಡಿದ ಹಣವನ್ನು ಕಾರ್ಯನಿರ್ವಾಹಕ ಅಭಿಯಂತರು ಲೋಕೋಪಯೋಗಿ ಖಾತೆ ಚಿಕ್ಕೋಡಿ ಇವರಿಗೆ ತಗಡುಗಳನ್ನು ತೆಗೆದುಕೊಳ್ಳಲು ಮತ್ತು ಗಳಾ ಮತ್ತು ಕಂಬಗಳನ್ನು ಅರಣ್ಯ ಇಲಾಕೆಯಿಂದ ಪಡೆದುಕೊಳ್ಳಲು ಹಂಚಲಾಗಿದೆ. ಟ್ಯಾಂಜೆಟ್ ಶೆಡ್ಡು ಈ ಕೆಳಗೆ ತೋರಿಸಿದಂತೆ ಕಟ್ಟಲಾಗಿದೆ.

ಸೈಟ್ ಹಂಚಿದ್ದರ ವಿವರ :

ಅ.	ಸಂಕೇಶ್ವರ ಪಟ್ಟಣದಲ್ಲಿ	106
ಬ.	ಪಾಶ್ಚಾಪೂರ ಮತ್ತು ಕೋಚರಿ ಗ್ರಾಮಗಳಲ್ಲಿ	26
		132

ಮೇವು :— ಸರ್ಕಾರವು 1 ಲಕ್ಷ ರೂಪಾಯಿಗಳನ್ನು ನೆರೆ ಹಾವಳಿ ಹಳ್ಳಿಗಳಲ್ಲಿ ಮೇವನ್ನು ಸಾಗಾಣಿಕೆ ಮಾಡಲು ಉಪಯೋಗಿಸಿದ ಖಾಸಗಿ ಲಾರಿಗಳ ಬಾಡಿಗೆಯನ್ನು ಕೊಡಲು ಬಿಡುಗಡೆ ಮಾಡಿದೆ. ಈ ಸಂಬಂಧದಲ್ಲಿ 60 ಸಾವಿರ ರೂ.ಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿ ಚಿಕ್ಕೋಡಿ, ಹುಕ್ಕೇರಿ ಮತ್ತು ಗೋಕಾಕ ಇವರಿಗೆ ತಲಾ 20 ಸಾವಿರ ರೂ.ಗಳಂತೆ ಬಿಡುಗಡೆ ಮಾಡಲಾಗಿದೆ.

ಇ. ಸ್ವಯಂ ಪ್ರೇರಿತ ಸಂಸ್ಥೆಗಳಿಂದ ಪರಿಹಾರಧನ ಪೂರೈಸುವುದರ ಬಗ್ಗೆ

ಸಂಸ್ಥೆಯ ಹೆಸರು	ಗ್ರಾಮ	ಸಾಮಗ್ರಿಗಳ ಸರಬರಾಜಿನ ವಿವರ
1. ದಾಂಡೇಲಿ ಪೇಪರಮಿಲ್ಲಿನ ಯುವಕ ಮತ್ತು ಮಹಿಳಾ ಸಂಘ	1. ಹೊಸೂರ 2. ಕೋಚರಿ	1–ಕ್ವಿಂಟಲ್ ಅಕ್ಕಿ 1–ಕ್ವಿಂಟಲ್ ಜೋಳ 50 ಕೆ.ಜಿ. ಸಕ್ಕರೆ 100 ಹೊಸ ಸಿರೆಗಳು ಮತ್ತು ಹಳೆ ಬಟ್ಟೆಗಳು.
2. ಅರಿವೆ ವ್ಯಾಪಾರಿ ಮತ್ತು ಇತರ ವ್ಯಾಪಾರಿ ಜನರ ಸಂಘ ಸಂಕೇಶ್ವರ.	1. ಸಂಕೇಶ್ವರ	1. 650 ಮೀಟರ್ ಹೊಸ ಅರಿವೆ.
3. ಕುರುಬರ ಸಹಕಾರಿ ಸಂಘ ಸಂಕೇಶ್ವರ.	1. ಸಂಕೇಶ್ವರ	50 ಕಂಬಳಿಗಳು.

ಅಯ್.ಆರ್.ಡಿ.ಪಿ.ಯಿಂದ ಸಹಾಯ

ಅರ್ಹನೊಂವ ನಿರಾಶ್ರಿತರಿಗೆ ವ್ಯಾಪಾರಿ ಮತ್ತು ಸಹಕಾರಿ ಬ್ಯಾಂಕುಗಳಿಂದ ಮುಂಗಡ ಸಾಲ ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಅಯ್.ಆರ್.ಡಿ.ಪಿ. ಯೋಜನೆ ಅರ್ಹರಾಗತಕ್ಕಂತಹ ಪ್ರವಾಹ ಪೀಡಿತರಿಗೆ ರಾಷ್ಟ್ರೀಕೃತ, ಹಾಗೂ ಸಹಕಾರಿ ಬ್ಯಾಂಕುಗಳ ಮುಖಾಂತರ ಮುಂಗಡ ಸಾಲವನ್ನು ಒದಗಿಸುವ ಕುರಿತು ಕ್ರಮ ಕೈಕೊಳ್ಳಲಾಗಿದೆ. ಸಹಾಯಧನವನ್ನು ಸಹ ಡಿ.ಆರ್.ಡಿ.ಎಸ್. ಮುಖಾಂತರ ಕೊಡಲಾಗುವುದು.

ಈ. ಸರ್ಕಾರದ ಪರಿಶೀಲನೆಯಲ್ಲಿದೆ,

ಉ. ಹುಕ್ಕೇರಿ ತಾಲ್ಲೂಕಿನಲ್ಲಿ ನಿರಾಶ್ರಿತರಲ್ಲದ 34 ಜನರಿಗೆ ಪರಿಹಾರ ಹಣ ರೂ. 13,750–ಕೊಟ್ಟಿದ್ದು ಇವರಿಂದ ಈಗಾಗಲೇ 4018–ವಸೂಲಿ ಮಾಡಲಾಗಿದೆ. ಉಳಿದ ಹಣ ರೂ. 9732–ವಸೂಲು ಮಾಡಲು ಕ್ರಮ ಕೈಗೊಳ್ಳಲಾಗಿದೆ.